ದಿನಾಂಕ:11-07-2018

# ತುರ್ತು ಪ್ರಕಟಣೆ

**ಕೇಂದ್ರ ಜಲ ಆಯೋಗ ಮತ್ತು ಕಾರ್ಯದರ್ಶಿ, ರಾಜ್ಯ ವಿಪತ್ತು ನಿರ್ವಹಣಾ ಕೋಶ, ಕಂದಾಯ ಇಲಾಖೆ ಇವರ ಸಲಹೆಯಂತೆ ಕೊಡಗು ಜಿಲ್ಲಾಡಳಿತ ಸಾರ್ವಜನಿಕರ ಸುರಕ್ಷತೆಯ ಹಿತದೃಷ್ಟಿಯಿಂದ ಈ ಕೆಳಕಂಡ ತುರ್ತು ಪ್ರಕಟಣೆಯನ್ನು ಹೊರಡಿಸಿದೆ.**

1. ಕೊಡಗು ಜಿಲ್ಲೆಯಾದ್ಯಂತ ಭಾರೀ ಗಾಳಿ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ನದಿ, ತೊರೆ ಹಾಗೂ ಇನ್ನಿತರೆ ಜಲಮೂಲಗಳಲ್ಲಿ ಏಕಾಏಕಿ ನೀರಿನ ಹರಿವು ಹೆಚ್ಚಳವಾಗುವ ಸಂಭವವಿದ್ದು, ಅಪಾಯ ಇರುವುದರಿಂದ ಸಾರ್ವಜನಿಕರು, ಪ್ರವಾಸಿಗರು ಈಜು ಮುಂತಾದ ಜಲಕ್ರೀಡೆಗಳಿಂದ ದೂರವಿರುವುದು

2. ಸುರಕ್ಷತೆಯ ದೃಷ್ಟಿಯಿಂದ ಪ್ರವಾಸಿಗರು, ಸಾರ್ವಜನಿಕರು ಮತ್ತು ಸ್ಥಳೀಯರು ನದಿ, ತೊರೆ ಇತ್ಯಾದಿಗಳಿಗೆ ಇಳಿಯುವುದು ಅಪಾಯಕಾರಿಯಾಗಿದೆ ಮತ್ತು ಮರ, ಬಿದಿರು ಇತ್ಯಾದಿ ಸ್ಥಳೀಯ ನಿರ್ಮಿತ ಸಾಧನಗಳಿಂದ ನದಿಯನ್ನು ದಾಟಬಾರದು. ಸುರಕ್ಷಿತ ವಿಧಾನವಾದ ದೋಣಿ/ಬೋಟ್‌ಗಳನ್ನು ನದಿ ದಾಟಲು ಬಳಸುವುದು.

3. ಜಿಲ್ಲೆಯಾದ್ಯಂತ ಸುರಿಯುತ್ತಿರುವ ಮಳೆಯಿಂದ ಜಿಲ್ಲೆಯ ಜಲಾಶಯಗಳು ತುಂಬಿದ್ದು, ನೀರನ್ನು ಹೊರ ಬಿಡಲಾಗುತ್ತಿದೆ. ಇದರಿಂದ ನದಿ ತೊರೆಗಳಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿದ್ದು, ನದಿ ತಟದಲ್ಲಿ ವಾಸವಿರುವವರು ಸದಾ ಜಾಗೃತರಾಗಿರುವುದು.

4. ಜಿಲ್ಲೆಗೆ ಆಗಮಿಸುವ ಪ್ರವಾಸಿಗರು ಸುರಕ್ಷತೆಯ ದೃಷ್ಟಿಯಿಂದ ನದಿ ತೊರೆ, ಜಲಪಾತ ಮುಂತಾದವುಗಳ ಸಮೀಪ ತೆರಳದೆ ಸುರಕ್ಷಿತ ಸ್ಥಳದಿಂದಲೇ ವೀಕ್ಷಿಸುವುದು.

5. ಸಾರ್ವಜನಿಕರು/ಪ್ರವಾಸಿಗರು ಮರಗಳ ಕೆಳಗೆ ಮತ್ತು ಎತ್ತರವಾದ ಬರೆ ಇರುವ ಪ್ರದೇಶಗಳಲ್ಲಿ ವಾಹನಗಳನ್ನು ನಿಲುಗಡೆಗೊಳಿಸಬಾರದು ಮತ್ತು ನಿಲ್ಲಬಾರದು.

6. ನದಿ ತೊರೆಗಳು ತುಂಬಿ ಸೇತುವೆ ಅಥವಾ ರಸ್ತೆಯ ಮೇಲೆ ನೀರು ಅಪಾಯಕಾರಿ ಮಟ್ಟದಲ್ಲಿ ಹರಿಯುತ್ತಿದ್ದಾಗ ಕಾಲ್ನಡಿಗೆ ಅಥವಾ ವಾಹನಗಳ ಮೂಲಕ ದಾಟಲು ಪ್ರಯತ್ನಿಸಬಾರದು.

7. ಸುರಕ್ಷತೆಯ ದೃಷ್ಟಿಯಿಂದ ವಾಹನ ಚಾಲಕರು ಸಾರಿಗೆ ನಿಯಮ, ರಸ್ತೆಯ ಅಂಚಿನಲ್ಲಿರುವ ಸಂಜ್ಞಾ ಫಲಕಗಳಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು ಹಾಗೂ ಕಡಿದಾದ ತಿರುವು ರಸ್ತೆಗಳಲ್ಲಿ ನಿಧಾನವಾಗಿ ಚಾಲಿಸುವುದು.

8. ತುರ್ತು ಸಂದರ್ಭಗಳಲ್ಲಿ ಜಿಲ್ಲಾಡಳಿತದ 24X7 ಕಾರ್ಯನಿರತ ಟೋಲ್ ಫ್ರೀ ಸಹಾಯವಾಣಿ (ಕಂಟ್ರೋಲ್ ರೂಂ) ಸಂಖ್ಯೆ: 08272-221077ನ್ನು ಸಂಪರ್ಕಿಸಬಹುದಾಗಿದೆ.

ಈ ಮೇಲಿನ ಸೂಚನೆಗಳೊಂದಿಗೆ ಸಾರ್ವಜನಿಕರು/ಪ್ರವಾಸಿಗರು ಭಾರೀ ಗಾಳಿ ಮಳೆಯಿಂದಾಗುವ ಅನಾಹುತಗಳ ಬಗ್ಗೆ ಅರಿತು ಸ್ವಪ್ರಜ್ಞೆಯಿಂದ ಜಾಗೃತರಾಗಿರಲು ಜಿಲ್ಲಾಡಳಿತ ಕೋರಿದೆ.

ಜಿಲ್ಲಾಧಿಕಾರಿಯವರ ಕಛೇರಿ
ಕೊಡಗು ಜಿಲ್ಲೆ, ಮಡಿಕೇರಿ

11/7/2018

(ಶ್ರೀವಿದ್ಯಾ ಪಿ.ಐ)
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಜಿಲ್ಲಾಧಿಕಾರಿಯವರು
ಕೊಡಗು ಜಿಲ್ಲೆ, ಮಡಿಕೇರಿ